**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2275/2024**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 02.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಫಕೀರಪ್ಪ ಕಳನಕೊಪ್ಪ |
| ತಂದೆಃ ಗಂಡನ ಹೆಸರು | ಶಿವಪ್ಪ |
| ಉದ್ಯೋಗ | ಶೇತ್ಕಿ |
| ವಯಸ್ಸು | 56 ವರ್ಷ |
| ವಾಸಸ್ಥಳ | ನೀರಸಾಗರ |

**ಮುಂದುವರೆದ ಪಾಟೀ ಸವಾಲುಃ 1 ರಿಂದ 6 ನೇ ಆಪಾದಿತರ ಪರ ಶ್ರೀ ಎಸ್ ಎಸ್ ಸಿ ವಕೀಲರು**

ದೂರನ್ನು ಗಣೀಕೃತ ಮಾಡಿ ದೊಡ್ಡಮನಿರವರು ನನಗೆ ಕೊಟ್ಟಾಗ ಸಮಯ ಬೆಳಿಗ್ಗೆ 10.30 ಗಂಟೆ ಆಗಿತ್ತು. ನಾನು ಠಾಣೆಗೆ ಬಂದು ದೂರನ್ನು ನೀಡಿದಾಗ ಸಮಯ ಬೆಳಿಗ್ಗೆ 11.00 ಗಂಟೆ ಆಗಿತ್ತು. ಧಾರವಾಡದಿಂದ ಕಲಘಟಗಿ ಸುಮಾರು 32 ಕಿ.ಮೀ ಅಂತರದಲ್ಲಿದೆ. ನಾನು ಧಾರವಾಡದಿಂದ ಕಲಘಟಗಿಗೆ ಬಸ್ ನಲ್ಲಿ ಕಣವಿಹೊನ್ನಾಪುರ ಗ್ರಾಮದ ಮಾರ್ಗವಾಗಿ ಬಂದೆನು. ಧಾರವಾಡದಿಂದ ಕಲಘಟಗಿಗೆ ಬರಲು ಎರಡು ಮಾರ್ಗಗಳು ಇವೆ. ನಾನು ದುಮ್ಮವಾಡ ಮಾರ್ಗವಾಗಿ ಧಾರವಾಡದಿಂದ ಕಲಘಟಗಿಗೆ ಬಂದೆನು. ಈ ಪ್ರಕರಣದ ದೂರನ್ನು ನೀಡುವ ಕಾಲಕ್ಕೆ ಧಾರವಾಡದಿಂದ ದುಮ್ಮವಾಡ ಮಾರ್ಗವಾಗಿ ಕಲಘಟಗಿಗೆ ಇದ್ದ ರಸ್ತೆಯು ಬಹಳ ಹಾಳಾಗಿತ್ತು ಎಂದರೆ ಸಾಕ್ಷಿಯು ಬಹಳ ಹಾಳೆನು ಆಗಿರಲಿಲ್ಲ ಎಂದು ನುಡಿಯುತ್ತಾರೆ. ಧಾರವಾಡದಿಂದ ಕಲಘಟಗಿಗೆ ಬರಲು 1 ರಿಂದ 1 ½ ತಾಸು ತೆಗೆದುಕೊಳ್ಳುತ್ತದೆ ಎಂದರೆ ಸಾಕ್ಷಿಯು 1 ತಾಸಿನಲ್ಲಿ ಧಾರವಾಡದಿಂದ ಕಲಘಟಗಿಗೆ ಬರಬಹುದು ಎಂದು ನುಡಿಯುತ್ತಾರೆ.

ಘಟನಾ ಸ್ಥಳದಿಂದ ನೀರಸಾಗರ ಕಲಘಟಗಿಗೆ 25 ಕಿ.ಮೀ ಅಂತರ ಇದೆ. ಸದರಿ ನೀರಸಾಗರ ಗ್ರಾಮದಿಂದ ಧಾರವಾಡದಿಂದ 29 ಕಿ. ಮೀ. ಅಂತರ ಇದೆ. ನೀವು ಗಾಯಾಳು ಎಂದು ನಿಮ್ಮ ಪಿರ್ಯಾದಿಯಲ್ಲಿ ಹೇಳಿದ್ದು ಸತ್ಯವಾದರೇ ಕಲಘಟಗಿ ಕಿಮ್ಸ ಆಸ್ಪತ್ರೆಯಲ್ಲಿ ಗಾಯ ಆದ ದಿನದಂದೇ ಚಿಕಿತ್ಸೆಯನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ತೊಂದರೆ ಇತ್ತು ಎಂದು ನುಡಿಯುತ್ತಾರೆ. ನನ್ನ ಹೆಬ್ಬರಳಿಗೆ ಗಾಯವಾಗಿ ರಕ್ತ ಸೋರುತ್ತಿತ್ತು ನಾನು ಧರಿಸಿದ ಶರ್ಟ್ ಮೇಲೆ ರಕ್ತ ಸೋರಿದ್ದು ನಾನು ಸಿವಿಲ್ ಆಸ್ಪತ್ರೆಗೆ ಹೋಗಿ ದಾಖಲಾಗಿ ಚಿಕಿತ್ಸೆಯನ್ನು ಪಡೆದನು.

**ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**